# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 215
2. ಸದಸ್ಯರ ಹೆಸರು : ಶ್ರೀ ಮಧು ಜಿ.ಮಾದೇಗೌಡ
3. ಉತ್ತರಿಸ ಬೇಕಾದ ದಿನಾಂಕ : 06.03.2025
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ನೀರು ಬಳಕೆದಾರರ ಸಹಕಾರ ಸಂಘಗಳ ಶೃಂಗ ಮಟ್ಟದ (ಅಪೆಕ್ಸ್) ಒಕ್ಕೂಟ ರಚಿಸುವ ಪ್ರಸ್ತಾವನೆ ಪ್ರಸ್ತುತ ಯಾವ ಹಂತದಲ್ಲಿದೆ; (ವಿವರ ನೀಡುವುದು) | • ಸರ್ಕಾರದ ಮಟ್ಟದಲ್ಲಿ, ನೀರು ಬಳಕೆದಾರರ ಸಹಕಾರ ಸಂಘಗಳ ರಾಜ್ಯ ಮಟ್ಟದ ಶೃಂಗ ಮಹಾಮಂಡಳ ರಚಿಸಲು ನಿರ್ದೇಶಕರು, ಕಾಡಾ ನಿರ್ದೇಶನಾಲಯ; ನಿರ್ದೇಶಕರು, ವಾಲ್ಮೀ ಧಾರವಾಡ; ನಿಗಮದ ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಮತ್ತು ಸಹಕಾರ ಇಲಾಖೆಯ ಅಧಿಕಾರಿ ಇವರುಗಳನ್ನೊಳಗೊಂಡಂತೆ ಕ್ರಮ ಕೈಗೊಳ್ಳುವ ಕುರಿತು ಸಭೆಯಲ್ಲಿ ಚರ್ಚಿಸಲಾಗಿದೆ.<br>• ಪ್ರಸ್ತುತ, ಕರ್ನಾಟಕ ರಾಜ್ಯ ನೀರು ಬಳಕೆದಾರರ ಸಹಕಾರ ಸಂಘಗಳ ರಾಜ್ಯ ಮಟ್ಟದ ಶೃಂಗ ಮಹಾಮಂಡಳದ ಮುಖ್ಯ ಪ್ರವರ್ತಕರ ಆಯ್ಕೆಯಾಗಿದೆ.<br>• ಮುಖ್ಯಪ್ರವರ್ತಕರು ಪ್ರಸ್ತಾವನೆಯನ್ನು ನಿಬಂಧಕರು, ಸಹಕಾರ ಇಲಾಖೆ ರವರಿಗೆ ಸಲ್ಲಿಸಿದ್ದು, ನೋಂದಣಿ ಕಾರ್ಯವು ಪ್ರಕ್ರಿಯೆಲ್ಲಿದೆ.<br>• ಕರ್ನಾಟಕ ರಾಜ್ಯ ನೀರು ಬಳಕೆದಾರರ ಸಹಕಾರ ಸಂಘಗಳ ರಾಜ್ಯ ಮಟ್ಟದ ಶೃಂಗ ಮಹಾಮಂಡಳದ ನೋಂದಣಿ, ಪತ್ರ ವ್ಯವಹಾರ, ಸಭೆಗಳನ್ನು ನಡೆಸಲು ಕೇಂದ್ರ ಕಛೇರಿಯನ್ನು ಸ್ಥಾಪಿಸುವ ಕುರಿತು ಪ್ರಕ್ರಿಯೆ ಜಾರಿಯಲ್ಲಿದೆ. |
| ಆ) | ಕಾರ್ಯನಿರತ ನೀರು ಬಳಕೆದಾರರ ಸಹಕಾರ ಸಂಘಗಳಿಗೆ ಪ್ರಸ್ತುತ ಒದಗಿಸುತ್ತಿರುವ ರೂ. 1.00 ಲಕ್ಷಗಳ ವಾರ್ಷಿಕ ಕಾರ್ಯಾನುದಾನ ಮತ್ತು ಏಕಕಾಲಿಕ ನಿರ್ವಹಣಾ ಅನುದಾನವನ್ನು ಪರಿಷ್ಕರಿಸಿ ಹೆಚ್ಚಿಸುವ ಸಂಬಂಧ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದ್ದ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ; (ವಿವರ ನೀಡುವುದು) | ಕರ್ನಾಟಕ ಆಡಳಿತ ಸುಧಾರಣಾ ಆಯೋಗ-2ರ ಜಲಸಂಪನ್ಮೂಲ ಇಲಾಖೆಗೆ ಸಂಬಂಧಿಸಿದಂತೆ ಶಿಫಾರಸ್ಸಿನ ಕಂಡಿಕೆ ಸಂಖ್ಯೆ:5.5 ಸಹಭಾಗಿತ್ವ ನೀರಾವರಿ ನಿರ್ವಹಣೆ ಅಡಿಯಲ್ಲಿ ನೀ.ಬ.ಸ.ಸಂಘಗಳ ನಿರ್ವಹಣೆಗಾಗಿ ರೂ.2.00 ಲಕ್ಷಗಳ ವಾರ್ಷಿಕ ಕಾರ್ಯಾನುದಾನವನ್ನು ಹೆಚ್ಚಿಸುವುದಕ್ಕೆ ಶಿಫಾರಸ್ಸು ಮಾಡಲಾಗಿದ್ದು, ಅದರನ್ವಯ ವಿಷಯವು ಪರಿಶೀಲನೆಯಲ್ಲಿದೆ. |
| ಇ) | ಸರ್ಕಾರವು ಹಾರಂಗಿ, ಕಬಿನಿ, ಮಲಪ್ರಭ ಮತ್ತು ಘಟಪ್ರಭಗಳ ನೀರು ಬಳಕೆದಾರರ ಸಹಕಾರ ಸಂಘಗಳ ಮಹಾಮಂಡಳಿಗಳಿಗೆ ಭದ್ರತಾ ಠೇವಣಿ ನೀಡಿರುವಂತೆ ಉಳಿದ ಮಹಾಮಂಡಳಿಗಳಿಗೆ ಭದ್ರತಾ ಠೇವಣಿ ನೀಡುವ ಕುರಿತು ಸರ್ಕಾರದ ನಿಲುವೇನು; | ಸರ್ಕಾರದ ಆದೇಶ ದಿನಾಂಕ:15.02.2007 ರನ್ವಯ ಈ ಕೆಳಕಂಡ 4 ಯೋಜನಾ ಮಟ್ಟದ ನೀ.ಬ.ಸ.ಸಂಘಗಳ ಮಹಾಮಂಡಳಗಳಿಗೆ ಷೇರು ಬಂಡವಾಳವನ್ನಾಗಿ ತೊಡಗಿಸಲು ರೂ.10.00 ಲಕ್ಷಗಳು, ಭದ್ರತಾ ಠೇವಣಿ ಇರಿಸಲಾಗಿದೆ.:<br>1. ಮಲಪ್ರಭಾ ಯೋಜನಾ ಮಟ್ಟದ ನೀ.ಬ.ಸ.ಸಂಘಗಳ ಮಹಾಮಂಡಳ; |

| | | |
|---|---|---|
| | | 2. ಘಟಪ್ರಭಾ ಯೋಜನಾ ಮಟ್ಟದ ನೀ.ಬ.ಸ.ಸಂಘಗಳ ಮಹಾಮಂಡಳ;<br>3. ಕಬಿನಿ ಯೋಜನಾ ಮಟ್ಟದ ನೀ.ಬ.ಸ.ಸಂಘಗಳ ಮಹಾಮಂಡಳ;<br>4. ಹಾರಂಗಿ ಯೋಜನಾ ಮಟ್ಟದ ನೀ.ಬ.ಸ.ಸಂಘಗಳ ಮಹಾಮಂಡಳ;<br>ಇನ್ನುಳಿದ ಇತರೆ ಅರ್ಹ ಮಹಾಮಂಡಳಗಳಿಗೆ ಅರ್ಹತೆಗೆ ಅನುಗುಣವಾಗಿ ಅನುದಾನವನ್ನು ಒದಗಿಸಲಾಗುವುದು. |
| ಈ) | ನೀರು ಬಳಕೆದಾರರ ಸಹಕಾರ ಸಂಘಗಳ ವ್ಯಾಪ್ತಿಯಲ್ಲಿ ಬರುವ ನಿರ್ವಹಣಾ ಕಾಮಗಾರಿಗಳನ್ನು ಸಂಘಗಳಿಗೆ<br>ವಹಿಸುವ ವಿಚಾರವಾಗಿ ಸರ್ಕಾರ ಈಗಾಗಲೇ ಆದೇಶ (ಆದೇಶ ಸಂಖ್ಯೆ:46 ಸಿಎಎ 2019, ದಿನಾಂಕ:17.08.2019)<br>ಹೊರಡಿಸಿದ್ದರೂ ಎಷ್ಟು ಮೊತ್ತದವರೆಗೆ ಯಾವ ಹಂತದ ಅಧಿಕಾರಿ ಆದೇಶ ನೀಡಬಹುದು ಎಂಬುವುದಕ್ಕೆ ಸ್ಪಷ್ಟತೆ<br>ಇರುವುದಿಲ್ಲ; ಹಾಗಾಗಿ, ಈ ಸಂಬಂಧ ವಿವಿಧ ಹಂತದ ಅಧಿಕಾರಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಿ ಆದೇಶ<br>ಹೊರಡಿಸಬಹುದಲ್ಲವೇ; | ಪರಿಶೀಲಿಸಲಾಗುವುದು. |
| ಉ) | ನಿಗಮದ ವ್ಯಾಪ್ತಿಯಲ್ಲಿರುವ 50 ಎಕರೆ ಕಡಿಮೆ ವಿಸ್ತೀರ್ಣದ ಕೆರೆ, ಕಟ್ಟೆ, ಕುಂಟೆಗಳಲ್ಲಿ ಮೀನು ಸಾಕಾಣಿಕೆ ಮತ್ತು<br>ಹಿಡಿಯುವಿಕೆಯನ್ನು ಪುನ: ಕಾರ್ಯನಿರತ ನೀರು ಬಳಕೆದಾರರ ಸಂಘಗಳಿಗೆ/ಮಹಾಮಂಡಳಿಗಳಿಗೆ ವಹಿಸುವ ಕುರಿತು<br>ಸರ್ಕಾರ ತನ್ನ ನಿರ್ಧಾರವನ್ನು ಪುನರ್ ಪರಿಶೀಲಿಸಬಹುದಲ್ಲವೇ? | ಪ್ರಸ್ತುತ, ಇಲಾಖೆಯ ವ್ಯಾಪ್ತಿಯಲ್ಲಿರುವ ಕೆರೆ, ಕಟ್ಟೆಗಳಲ್ಲಿನ ಮೀನು ಸಾಕಾಣಿಕೆ & ಹಿಡಿಯುವಿಕೆಯನ್ನು ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಡಿಯಲ್ಲಿನ ಮಾರ್ಗಸೂಚಿಗಳನ್ವಯ ನಿರ್ವಹಿಸಲಾಗುತ್ತಿದೆ.<br><br>ಮುಂದುವರೆದು, ನೀರು ಬಳಕೆದಾರರ ಸಂಘಗಳಿಗೆ/ಮಹಾಮಂಡಳಿಗಳಿಗೆ ವಹಿಸುವ ಕುರಿತು ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆರವರೊಂದಿಗೆ ಸಮಾಲೋಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. |

**ಸಂಖ್ಯೆ: ಜಸಂಇ:138:ಸಿಎಎಂ:2025**

**(ಡಿ.ಕೆ.ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**